ರಾಜ್ಯದ ಗ್ರಾಮೀಣ ನೀರು ಸರಬರಾಜು

2877(3606) : ಶ್ರೀ ಬಚ್ಚೇಗೌಡ ಬಿ.ಎನ್ (ಹೊಸಕೋಟೆ) ಮಾನ್ಯ ಗ್ರಾಮೀಣ ನೀರು ಸರಬರಾಜು ರಾಜ್ಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೆ?

ಅ) ರಾಜ್ಯದ ಗ್ರಾಮೀಣ ಪ್ರದೇಶಗಳಲ್ಲಿ ಬರಪರಿಹಾರ ಯೋಜನೆಯಡಿಯಲ್ಲಿ ಜೂನ್ 03ರ ಅಂತ್ಯದವರೆಗೆ ಕೊರೆದಿರುವ ಕೊಳವೆ ಬಾವಿಗಳು ಎಷ್ಟು: (ಜಿಲ್ಲಾವಾರು ವಿವರ ನೀಡುವುದು)

ಆ) ಇವುಗಳಲ್ಲಿ ಎಷ್ಟು ಕೊಳವೆ ಬಾವಿಗಳು ಸಫಲವಾಗಿವೆ ಮತ್ತು ವಿಫಲವಾಗಿವೆ;

ಇ) ಈ ಕಾರ್ಯಕ್ಕೆ ಇಲ್ಲಿಯವರೆಗೆ ಬಿಡುಗಡೆ ಮಾಡಿದ ಹಾಗೂ ಬಿಡುಗಡೆ ಮಾಡಬೇಕಾಗಿರುವ ಬಾಕಿ ಹಣವೆಷ್ಟು;

ಈ) ಗ್ರಾಮೀಣ ಜನತೆಗೆ ತೀವ್ರತರವಾದ ಬರದ ಹಿನ್ನೆಲೆಯಲ್ಲಿ ಕುಡಿಯುವ ನೀರಿನ ಸಮಸ್ಯೆಯನ್ನು ಬಗೆಹರಿಸಲು ಹಾಕಿಕೊಂಡಿರುವ ಕಾರ್ಯಕ್ರಮಗಳೇನು;

ಉ) ಇಲ್ಲಿಯವರೆಗೆ ಬಿಡುಗಡೆ ಮಾಡಿರುವ ಹಣವನ್ನು ಯಾವ ಯಾವ ಮೂಲಗಳಿಂದ ಭರಿಸಲಾಗಿದೆ: ಮತ್ತು ಸಾಲ ಪಡೆಯಲಾಗಿದೆಯೆ?

ಶ್ರೀ ಕೆ.ಬಿ. ಕೋಳಿವಾಡ್ (ಗ್ರಾಮೀಣ ನೀರು ಸರಬರಾಜು ರಾಜ್ಯ ಸಚಿವರು):

ಅ) ಬರ ಪರಿಸ್ಥಿತಿಯಿಂದಾಗಿ ರಾಜ್ಯದ ಗ್ರಾಮೀಣ ಪ್ರದೇಶಗಳಲ್ಲಿ ಉಂಟಾಗಿರುವ ಕುಡಿಯುವ ನೀರಿನ ಸಮಸ್ಯೆಯನ್ನು ಪರಿಹರಿಸಲು ಜೂನ್ 2003ರ ಅಂತ್ಯದವರೆಗೆ ಕೊರೆದಿರುವ ಕೊಳವೆ ಬಾವಿಗಳ ವಿವರಗಳನ್ನು ಸಫಲ ಮತ್ತು ವಿಫಲ ಕೊಳವೆ ಬಾವಿಗಳ ವಿವರಗಳೊಂದಿಗೆ ಅನುಬಂಧ–1 ರಲ್ಲಿ ನೀಡಲಾಗಿದೆ;

ಆ) ಪ್ರಕೃತಿ ವಿಕೋಪ ಪರಿಹಾರ ನಿಧಿಯಡಿ ಕೊಳವೆ ಬಾವಿಗಳನ್ನು ಕೊರೆಯಲು ಅವಕಾಶವಿರುವುದಿಲ್ಲ. ಆದ್ದರಿಂದ, ರಾಜ್ಯ ವಲಯದಡಿ ರೂ.10.00 ಕೋಟಿಗಳನ್ನು ಈ ಉದ್ದೇಶಕ್ಕಾಗಿ 25 ಜಿಲ್ಲಾ ಪಂಚಾಯತಿಗಳಿಗೆ ಬಿಡುಗಡೆ ಮಾಡಲಾಗಿದೆ. ಹಾಗೂ ಗ್ರಾಮೀಣ ನೀರು ಸರಬರಾಜು ಯೋಜನೆಗಳ ದುರಸ್ತಿ/ಪುನಃಶ್ಚೇತನ ಕಾಮಗಾರಿಗಳನ್ನು ಪ್ರಕೃತಿ ವಿಕೋಪ ಪರಿಹಾರ ನಿಧಿಯಡಿ ಕೈಗೊಳ್ಳುತ್ತಿರುವುದರಿಂದ, ನಿರ್ವಹಣಾ ಅನುದಾನದಡಿ ರೂ.50.00 ಲಕ್ಷ ಮಿತಿಗೊಳಪಟ್ಟು ಹಣವನ್ನು ಮೀಸಲಾಗಿಟ್ಟುಕೊಂಡು ಹೊಸ ಕೊಳವೆ ಬಾವಿಗಳನ್ನು ಕೊರೆಯಲು ಜಿಲ್ಲಾ ಪಂಚಾಯತಿಗಳಿಗೆ ಸೂಚಿಸಲಾಗಿದೆ.

ಇ) ಕುಡಿಯುವ ನೀರಿನ ಸಮಸ್ಯೆಯನ್ನು ಪರಿಹರಿಸಲು ಹಾಲಿ ಕೊಳವೆ ಬಾವಿಗಳಲ್ಲಿಯ ಇಳುವರಿಯನ್ನು ಕೊಳವೆ ಬಾವಿಗಳನ್ನು ಆಳಗೊಳಿಸುವ/ಹೈಡ್ರೋಫ್ರಾಕ್ಚರ್‌ಗೊಳಿಸುವ ಮೂಲಕ ಹೆಚ್ಚಿಸಲು ಕ್ರಮ ಕೈಗೊಳ್ಳಲಾಗಿದೆ. ತೀವ್ರ ಕುಡಿಯುವ ನೀರಿನ ಸಮಸ್ಯೆ ಉಂಟಾದಲ್ಲಿ, ಹೊಸದಾಗಿ ಕೊಳವೆ ಬಾವಿ ಕೊರೆಯಲು/ಟ್ಯಾಂಕರ್ ಮುಖಾಂತರ ನೀರು ಪೂರೈಕೆ ಮಾಡಲು ಕ್ರಮ ಕೈಗೊಳ್ಳಲಾಗಿದೆ.

ಈ) ಇಲ್ಲಿಯವರೆಗೆ ಬಿಡುಗಡೆ ಮಾಡಿರುವ ಹಣವನ್ನು ರಾಜ್ಯ/ಕೇಂದ್ರ ವಲಯಗಳಡಿ ಭರಿಸಲಾಗಿದ್ದು, ಸಾಲ ಪಡೆದಿರುವುದಿಲ್ಲ.

ಅನುಬಂಧ–1/Annexure-1

ರಾಜ್ಯದ ಗ್ರಾಮೀಣ ಪ್ರದೇಶಗಳಲ್ಲಿ ಬರ ಪರಿಸ್ಥಿತಿಯಿಂದಾಗಿ ಉಂಟಾಗಿರುವ ಕುಡಿಯುವ ನೀರಿನ ಸಮಸ್ಯೆಯನ್ನು ಪರಿಹರಿಸಲು ಜೂನ್ 2003ರ ಅಂತ್ಯದವರೆಗೆ ಕೊರೆದಿರುವ ಕೊಳವೆ ಬಾವಿಗಳ ವಿವರಗಳು

ಕ್ರಮ ಸಂಖ್ಯೆ	ಜಿಲ್ಲಾ ಪಂಚಾಯತ್	ಕೊರೆದಿರುವ ಕೊಳವೆ ಬಾವಿಗಳ ಒಟ್ಟು ಸಂಖ್ಯೆ	ಸಫಲ	ವಿಫಲ
1	ಬೆಂಗಳೂರು (ಗ್ರಾ)	290	241	49
2	ಬೆಂಗಳೂರು (ನ)	416	358	58
3	ದಾವಣಗೆರೆ	38	28	10
4	ಕೋಲಾರ	784	610	174
5	ಶಿವಮೊಗ್ಗ	29	27	2
6	ತುಮಕೂರು	184	165	19
7	ಚಿತ್ರದುರ್ಗ	321	272	49
8	ಚಾಮರಾಜನಗರ	124	124	0
9	ಮೈಸೂರು	58	53	5
10	ಮಂಡ್ಯ	165	165	0
11	ಚಿಕ್ಕಮಗಳೂರು	213	179	34
12	ಹಾಸನ	73	65	8
13	ಬಾಗಲಕೋಟೆ	263	253	10
14	ಬೆಳಗಾವಿ	163	127	36
15	ಬಿಜಾಪುರ	199	183	16
16	ಧಾರವಾಡ	53	47	6
17	ಗದಗ	120	117	3
18	ಹಾವೇರಿ	274	245	29
19	ಉತ್ತರ ಕನ್ನಡ	50	45	5
20	ಬಳ್ಳಾರಿ	374	336	38
21	ಬೀದರ್	88	79	9
22	ಗುಲ್ಬರ್ಗಾ	171	146	25
23	ಕೊಪ್ಪಳ	43	43	0
24	ರಾಯಚೂರು	82	82	0
	ಒಟ್ಟು	4575	3990	585

ರಾಜ್ಯದಲ್ಲಿ ಭಾಷಾ ಅಲ್ಪಸಂಖ್ಯಾತ ಶಿಕ್ಷಣ ಸಂಸ್ಥೆಗಳು

2921 (3291) : ಶ್ರೀ ಹೊನ್ನಳ್ಳಿ ಜಬ್ಬರ್ ಖಾನ್ ಹೈಯತ್ ಖಾನ್ (ಹುಬ್ಬಳ್ಳಿ) ಮಾನ್ಯ ಪ್ರಾಥಮಿಕ ಮತ್ತು ಪ್ರೌಢ ಶಿಕ್ಷಣ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೆ?

ಅ) ರಾಜ್ಯದಲ್ಲಿ ಒಟ್ಟು ಎಷ್ಟು ಭಾಷಾ ಅಲ್ಪಸಂಖ್ಯಾತ ಶಿಕ್ಷಣ ಸಂಸ್ಥೆಗಳಿರುತ್ತವೆ; ಜಿಲ್ಲಾವಾರು ವಿವರ ನೀಡುವುದು;